**O.S.No.15/2019**
**PW1**

ದಿನಾಂಕ 11.11.2025 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ ಎಸ್.ಎನ್ ವಕೀಲರಿಂದಃ

ಈ ದಾವೆಯನ್ನು ಉದ್ಘೋಷಣೆ ಮತ್ತು ತಾತ್ಕಾಲಿಕ ನಿರ್ಬಂಧಕಾಜ್ಞೆ ಪರಿಹಾರ ಕೋರಿ ಸಲ್ಲಿಸಲಾಗಿದೆ. ನಾನು ವೃತ್ತಿಯಲ್ಲಿ ವಕೀಲನಾಗಿರುತ್ತೇನೆ ಎಂದರೆ ಸರಿ. ಈ ದಾವೆಯನ್ನು ಮಠದ ಸ್ವಾಮೀಜಿಗಳ ಪರವಾಗಿ ಸುದರ್ಶನ್ ಜೋಯಿಶ್ ಎಂಬುವವರು ಸಲ್ಲಿಸಿರುತ್ತಾರೆ. ಅವರು ಮಠದ ದಿವಾನರಾಗಿರುತ್ತಾರೆ. ದಿವಾನ ಎಂದರೆ ಮಂತ್ರಿಯಾಗಿರುತ್ತಾರೆ. ವಾದಿ ಮಠದ ಹೆಸರು ಸಂಪುಟ ನರಸಿಂಹಸ್ವಾಮಿ ಸುಬ್ರಹ್ಮಣ್ಯ ಎಂದು ಇರುತ್ತದೆ. ಮಠದ ಹೆಸರು ಶ್ರೀ ಸಂಪುಟ ನರಸಿಂಹಸ್ವಾಮಿ ಮಠ, ಸುಬ್ರಹ್ಮಣ್ಯ ಎಂದರೆ ಸಾಕ್ಷಿ ಸಂಪುಟ ನರಸಿಂಹಸ್ವಾಮಿ ಸುಬ್ರಹ್ಮಣ್ಯ ಮಠ ಮತ್ತು ಶ್ರೀ ಸಂಪುಟ ನರಸಿಂಹಸ್ವಾಮಿ ಮಠ, ಸುಬ್ರಹ್ಮಣ್ಯ ಎರಡೂ ಸಹ ಒಂದೇ ಹೆಸರು ಆಗಿರುತ್ತದೆ ಎಂದು

ನುಡಿಯುತ್ತಾರೆ. ನಿಪಿ–1 ಪಹಣಿ ಪತ್ರಿಕೆಯಲ್ಲಿ ಶ್ರೀ ಸಂಪುಟ ನರಸಿಂಹಸ್ವಾಮಿ ಸುಬ್ರಹ್ಮಣ್ಯ ಮಠ ಎಂದು ನಮೂದಾಗಿರುವುದಿಲ್ಲ, ಆದರೆ ನರಸಿಂಹ ದೇವರು ಎಂದು ನಮೂದಾಗಿರುತ್ತದೆ. ದಾವಾ ಆಸ್ತಿ ವಾದಿ ಮಠಕ್ಕೆ ಸೇರಿದ್ದು ಎಂಬ ಬಗ್ಗೆ ನಮ್ಮ ಬಳಿ ಆರ್.ಟಿ.ಸಿ ಮತ್ತು ಅಡಂಗಲ್ ಇದೆ. ತುಂಬಾ ಹಿಂದಿನಿಂದ ಬಂದ ಆಸ್ತಿಯಾಗಿರುವ ಕಾರಣ ಯಾವುದೇ ರೀತಿ ಕ್ರಯ ಪತ್ರ ಅಥವಾ ಬೇರೆ ಮೂಲ ದಾಖಲೆಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನರಸಿಂಹ ದೇವರು 3ನೇ ಪ್ರತಿವಾದಿ ದೇವಾಲಯದ ಒಂದು ಪರಿವಾರ ದೇವರು ಎಂದರೆ ಸರಿಯಲ್ಲ. ನಾನು 3ನೇ ಪ್ರತಿವಾದಿ ದೇವಾಲಯದ ಚರ ಸ್ಥಿರ ಸ್ವತ್ತುಗಳ ರಿಜಿಸ್ಟರನ್ನು ನೋಡಿರುತ್ತೇನೆ. ಅದರಲ್ಲಿ ನರಸಿಂಹ ದೇವರನ್ನು ಪರಿವಾರ ದೇವರು ಎಂದು ತೋರಿಸಿದ್ದಾರೆ ಎಂದರೆ ನನಗೆ ನೆನಪಿಲ್ಲ. ನರಸಿಂಹ ದೇವರ ಹೆಸರಿನಲ್ಲಿರುವ ಆಸ್ತಿಗಳು ನಮ್ಮ ಮಠಕ್ಕೆ ಸೇರಿದ್ದು ಎಂಬ ಬಗ್ಗೆ ನಾನು ದಾಖಲೆಗಳನ್ನು ನೋಡಿ ಹೇಳಬೇಕು.

ಸುಳ್ಯ ಸಿವಿಲ್ ನಾಯಾಲಯದಲ್ಲಿ ಮಠದ ಪರವಾಗಿ ಒಂದು ಉದ್ಘೋಷಣೆಗಾಗಿ ಒಂದು ದಾವೆ ಸಲ್ಲಿಸಿರುವ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ದಾವೆಯಲ್ಲಿ ಸುಮಾರು 62 ಎಕ್ರೆ ಆಸ್ತಿಗಳು ಇದ್ದು, ಅದರಲ್ಲಿ ಈ ದಾವಾ ಆಸ್ತಿಯೂ ಸಹ ಇದೆ ಎಂದರೆ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ದಾವೆಯಲ್ಲಿ ತೋರಿಸಿದ ಎಲ್ಲಾ ಜಮೀನುಗಳು ನರಸಿಂಹ ದೇವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಸರ್ಕಾರದ ವಿರುದ್ಧ ದೇವಸ್ಥಾನವನ್ನು ಪ್ರತಿವಾದಿ ಮಾಡದೇ ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ದೇವಸ್ಥಾನದ ಆಸ್ತಿಗಳನ್ನು ಮಠದವರು ಕಬಳಿಸಿದ್ದಾರೆ ಎಂದು ಧಾರ್ಮಿಕ ದತ್ತಿ ಇಲಾಖೆಯಿಂದ ಮಠದವರಿಗೆ ನೋಟೀಸು ನೀಡಿ ಪ್ರಕರಣ ತನಿಖೆ ಪ್ರಾರಂಭವಾದ ನಂತರ ಮಠದ ಪರವಾಗಿ ಒ.ಎಸ್ ನಂಃ 67/2023 ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ದಾವೆಯಲ್ಲಿ ಹೇಳಿದ

ಹಾಗೆ ನರಸಿಂಹ ದೇವರ ಹೆಸರಿನಲ್ಲಿರುವ ಆಸ್ತಿಗಳು ಮಠದ ಆಸ್ತಿಗಳು ಎಂದು ಈ ದಾವೆಯಲ್ಲೂ ಸಹ ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ವಾದಿ ಜಿ.ಪಿ.ಎ ನೀಡುವ ಮೊದಲು ಏನೆಲ್ಲಾ ಆಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ–9 ರಲ್ಲಿ ಈ ದಾವಾ ಆಸ್ತಿಯ ಸರ್ವೆ ನಂಬರ್ ನಮೂದಿಸಿರುವುದಿಲ್ಲ. ನರಸಿಂಹ ದೇವರ ಪರವಾದ ಆಸ್ತಿಗಳ ಕುರಿತು ವ್ಯವಹರಣೆ ಮಾಡಲು ನನಗೆ ಮಠದ ಪರವಾಗಿ ಜಿ.ಪಿ.ಎ ನೀಡಿರುತ್ತಾರೆ. ಆದರೆ ನರಸಿಂಹ ದೇವರ ಆಸ್ತಿಯ ಕುರಿತು ವ್ಯವಹಾರ ಮಾಡುವ ಕುರಿತು ನಿಪಿ–9ರಲ್ಲಿ ಪ್ರತ್ಯೇಕವಾಗಿ ನಮೂದು ಮಾಡಿರುವುದಿಲ್ಲ. ದಾವಾ ಆಸ್ತಿಯ ಬಗ್ಗೆ ನನಗೆ ಸ್ವಂತ ಅನುಭವ ಇರುತ್ತದೆ. 3ನೇ ಪ್ರತಿವಾದಿಯ ದೇವಾಲಯದಲ್ಲಿ ಶ್ರೀ ಸಂಪುಟ ನರಸಿಂಹ ಸ್ವಾಮಿ ಮಠ, ಸುಬ್ರಹ್ಮಣ್ಯ ಮೂರು ತಲೆಮಾಡಿನ ಸ್ವಾಮೀಜಿಗಳು 1845 ರಿಂದ 1900 ರವರೆಗೆ ಬ್ರಿಟೀಷ್ ಸರಕಾರದ ವತಿಯಿಂದ 3ನೇ ಪ್ರತಿವಾದಿ ದೇವಾಲಯದ ಟ್ರಸ್ಟ್ ನ ಒಬ್ಬ ಸದಸ್ಯರಾಗಿ ನೇಮಕವಾಗಿದ್ದರು ಎಂದರೆ ಸಾಕ್ಷಿ ದೇವಾಲಯ ಸಂಪೂರ್ಣ ಆಡಳಿತ ಮಠದ ಸ್ವಾಮೀಜಿಯವರ ಬಳಿ ಇತ್ತು ಎಂದು ನುಡಿಯುತ್ತಾರೆ. 1900 ರಿಂದ ದೇವಾಲಯ ಟ್ರಸ್ಟ್ ನಲ್ಲಿ ಮಠದವರಿಗೆ ಸದಸ್ಯತ್ವ ಸಿಕ್ಕಿರುವುದಿಲ್ಲ ಎಂದರೆ ಸರಿ. ಯಾವುದೋ ಒಂದು ದಾವೆಯಿಂದ ಸದಸ್ಯತ್ವ ಸಿಕ್ಕಿರುವುದಿಲ್ಲ.

1900 ನೇ ಇಸವಿಯಲ್ಲಿ ದೇವಾಸ್ಥಾನದ ಟ್ರಸ್ಟಿಯಾಗಿದ ಮಠದ ಸ್ವಾಮೀಜಿಯಾಗಿದ್ದ ಸಿಸಿ ನಂಃ 126/1900 ಮತ್ತು 127/1900 ಭಾರತೀಯ ದಂಡ ಸಂಹಿತೆ ಕಲಂ 409 ರಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿ ಸದರಿ ಪ್ರಕರಣಗಳಲ್ಲಿ ಮಠದ ಸ್ವಾಮೀಜಿಯವರಿಗೆ ಶಿಕ್ಷೆಯಾಗಿರುತ್ತದೆ ಎಂದರೆ ಸಾಕ್ಷಿ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿ ಮಠದ ಸ್ವಾಮೀಜಿ ನಿರಪರಾಧಿ ಎಂದು ಬಿಡುಗಡೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ಮಠದ ಸ್ವಾಮೀಜಿಗಳಿಗೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ರೂ.500 ದಂಡ ಹಾಗೂ

ಮತ್ತೊಂದು ಪ್ರಕರದಲ್ಲಿ ಒಂದು ವರ್ಷ ಶಿಕ್ಷೆ ಮತ್ತು ರೂ.1000 ದಂಡ ವಿಧಿಸಿದ್ದಾರೆ ಎಂದರೆ ಇರಬಹುದು. ಸದರಿ ಸ್ವಾಮೀಜಿಗಳು ದೇವರ ಅಭರಣವನ್ನು ಮಠದ ಸಾಲಕ್ಕಾಗಿ ಅಡಮಾನ ಮಾಡಿದ ಕಾರಣಕ್ಕಾಗಿ ಪ್ರಕರಣ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎರಡೂ ಪ್ರಕರಣಗಳಲ್ಲಿ ಮೇಲ್ಮನವಿಯಲ್ಲಿ ಶಿಕ್ಷೆಯನ್ನು ಖಾಯಂ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಶಿಕ್ಷೆ ಖಾಯಂ ಆದ ನಂತರ ಸದರಿ ಸ್ವಾಮೀಜಿಗಳು ಮಠದಿಂದ ಓಡಿ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸಿ ಶಿಕ್ಷೆ ರದ್ದು ಮಾಡಿದ ಕುರಿತು ನಾನು ಖುದ್ದಾಗಿ ತೀರ್ಪುಗಳನ್ನು ನೋಡಿರುವುದಿಲ್ಲ,ಆದರೆ ಸ್ವಾಮೀಜಿಗಳು ನನಗೆ ತಿಳಿಸಿರುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ